ಮಹೇಶ್‌ಕುಂಚಿಗನಾಳು,
ಉಪನ್ಯಾಸಕರು,
ಸ.ಪ.ಪೂ.ಕಾಲೇಜು,ಲಕ್ಕನಹಳ್ಳಿ. ತುಮಕೂರು

# ಚಿತ್ರದುರ್ಗದ ಪಂಡರಳ್ಳಿಯಲ್ಲಿರುವುದು ಕರ್ನಾಟಕದಲ್ಲಿ ಮಹಿಳೆಯೇ ರಚಿಸಿದ ಮೊದಲ ಶಾಸನವೇ? ಒಂದು ಮರು ವಿವೇಚನೆ.

ಚಿತ್ರದುರ್ಗ ಸಾಂಸ್ಕೃತಿಕವಾಗಿ ಸಂಪದ್ಭರಿತ ನೆಲೆಯಾಗಿದೆ. ಇಲ್ಲಿ ಮೊದಲ ತಮಿಳು ಶಾಸನ, ಮಯೂರವರ್ಮನ ಏಕೈಕ ಶಾಸನ, ಅಶೋಕನ ಶಾನಗಳು ದೊರೆತಿವೆ. ಅದೆ ಸಾಲಿಗೆ ಸೇರುವಂತಹದು ಮೊದಲ ಮಹಿಳಾ ಶಾಸನ ಕವಿ ಬಿಜಾಬ್ಬೆಯ ಪಂಡರಳ್ಳಿ ಶಾಸನವಾಗಿದೆ.

ಚಿತ್ರದುರ್ಗವು ರಕ್ಷಣಾತ್ಮಕವಾಗಿ ಬೆಟ್ಟಗುಡ್ಡಗಳಿಂದ ಕೂಡಿದ್ದು ಬಲವಾದ ರಕ್ಷಣೆ, ಹಾಗೂ ವಾಣಿಜ್ಯದ ದಾರಿಯನ್ನು ಹೊಂದಿದ್ದರಿಂದ ಆರ್ಥಿಕವಾಗಿ ಗಮನಾರ್ಹವಾದ ಪ್ರಗತಿಯನ್ನು ಸಾಧಿಸಿತ್ತು ಸಹಜವಾಗಿ ಅನೇಕ ರಾಜಮನೆತನಗಳ ಕುರುಹುಗಳು ಚಿತ್ರದುರ್ಗದಲ್ಲಿ ಕಾಣಸಿಗುತ್ತವೆ.

ಚಿತ್ರದುರ್ಗ ಜಿಲ್ಲಾ ಕೇಂದ್ರದಿಂದ ಸುಮಾರು ಹತ್ತು ಕೀ.ಮೀ ದೂರದಲ್ಲಿ ಹೊಳಲ್ಕೆರೆಗೆ ಹೋಗುವ ಮಾರ್ಗದಲ್ಲಿ ಪಂಡರಳ್ಳಿ ರಂಗನಾಥ ಸ್ವಾಮಿ ಬೆಟ್ಟ ಪರಿಸರವಿದೆ. ಇಲ್ಲಿನ ಬಿಜಾಬ್ಬೆ ಶಾಸನವನ್ನು ಬಿ.ಎಲ್. ರೈಸ್ ರವರು ಪತ್ತೆ ಮಾಡಿ ೧೯೦೩ ರ ಎಪಿಗ್ರಾಫಿಯ ಕರ್ನಾಟಕಸಂ ಸಂಪುಟ ೧೧ ರಲ್ಲಿ ಚಿತ್ರದುರ್ಗ ತಾಲ್ಲೂಕಿನ ಶಾಸನಗಳು ಭಾಗದ ೨೪ ನೇ ಶಾಸನವಾಗಿ ಪ್ರಕಟಿಸಿದ್ದಾರೆ. ಶಾಸನವು ಭೀಮೇಶ್ವರ ಗುಹಾಂತರ ದೇವಾಲಯ ಎದುರಿನ ಬಂಡೆಯ ಮೇಲಿದೆ. ಶಾಸನ ಬಂಡೆಯ ಪಕ್ಕದಲ್ಲಿ ಕಟ್ಟಡದ ರಚನೆಯ ನಿವೇಶನವಿದೆ. ಅಲ್ಲಿ ಒಂದು ಬಂಡೆಯನ್ನು ಕೊರೆದು ಮಾಡಿ ಗೂಡಲ್ಲಿ ದಂಪತಿಗಳನ್ನು ಹೋಲುವ ಮೂರ್ತಿಗಳ ಶಿಲ್ಪಗಳಿವೆ. ಶಾಸನದ ಮುಂದೆ ಪಕ್ಕದಲ್ಲಿ ಬೆಟ್ಟದ ಶಿಖರವನ್ನು ತಲುಪುವ ಕಲ್ಲು ಹಾಸಿನ ಮೆಟ್ಟಿಲುಗಳ ಪ್ರಾಚೀನ ದಾರಿ ಇದೆ. ಇಲ್ಲಿ ಮೊದಲಿನಿಂದಲೂ ಜನ ಸಂಚಾರವಿರಬೇಕು. ಅವರಿಗೆ ಕಾಣುವಂತೆ ದಪ್ಪ ಅಕ್ಷರಗಳಲ್ಲಿ ಶಾಸನವನ್ನು ಕೊರೆಯಲಾಗಿದೆ, ಬಿ.ಎಲ್ ರೈಸ್ ರವರು ಮೈಸೂರು ಕರ್ನಾಟಕದ ಸುಮಾರು ೯೦೦೦ಕ್ಕೂ ಹೆಚ್ಚು ಶಾಸನಗಳನ್ನು ೧೨ ಸಂಪುಟಗಳಲ್ಲಿ ಪ್ರಕಟಿಸಿದ ಕೀರ್ತಿ ರೈಸ್‌ರವರಿಗೆ ಸಲ್ಲುತ್ತದೆ. ಆದರೆ ಪಂಡರಳ್ಳಿ ಶಾಸನದ ಕಾಲನಿರ್ಣಯ ತೊಡಕಾಗಿ ಅವರಿಗೆ ಕಾಡಿದೆ, ಇಲ್ಲಿನ ಒಂದಷ್ಟು ಅಕ್ಷರಗಳು ತಮಟಕಲ್ಲು ಶಾಸನ ಹೋಲುವುದರಿಂದ ಈ ಶಾಸನದ ಕಾಲವನ್ನು ಕ್ರಿ.ಶ. ೫೦೦? ಎಂದು ಪ್ರಶ್ನಾರ್ಥಕವಾಗಿ ಸೂಚಿಸಿದ್ದಾರೆ. ಲಿಪಿಯ ಕಾಲದ ಬಗ್ಗೆ ಅವರಿಗೆ ಅನುಮಾನವಿದ್ದಂತೆ ತೋರುತ್ತದೆ.

ಬಿ.ಎಲ್ ರೈಸ್‌ರವರು ಓದಿನ ಶಾಸನ ಪಠ್ಯ ಹೀಗಿದೆ.

ಸ್ವಸ್ತಿ ಶ್ರೀ ಚನ್ದಿಯಮ್ಮರಸ ದೇವರ್ಗ್ಗೆ ಮಣ್ಣಮ್ ಕೊಟ್ಟ ಸುಳ್ಗಲ್ನಾಡುಂ ಪಿಟ್ಟಗೆರೆ ಪನ್ನೆರಡು

ಗಾಮುಣ್ಡ ಪ್ರಜೆ ಸಕ್ಷಿ ವೋವಕಾವಳಿಗ ಭಟಾರರ್ಪಡೆದೊಮ್ಮಣ್ಣಮ್

ಇದ ಯಾನಳಿದೊಂ ಪಞ್ಚ ಮಹಾಪಾತಕನಕ್ಕುಮ್

ಬಹುಭಿರ್ವಸುಧಾ ಬುಕ್ತಾವ ರಾಜಭಿಸ್ಸಕರಾಜಭಿ:

ಯಸ್ಯ ಯಸ್ಯ ಯದಾ ಭೂಮಿ ತಸ್ಯ ತಸ್ಯ ತದಾಪಲಂ

ಶ್ರೀ ಬಿಜಾಬೆ.

(ಕನ್ನಡ ಪಠ್ಯದಲ್ಲಿ ಬಿಜೋಬೆ ಎಂದಿದೆ. ರೈಸ್ ಬರೆದ ಇಂಗ್ಲೀಷ್ ಓದುವಿಕೆಯನ್ನು ಕನ್ನಡಕ್ಕೆ ಬರೆದವರು ಬಿಜೋಬೆ ಎಂದು ಬರೆದಿರಬೇಕು)

ಶಾಸನದ ಅರ್ಥವನ್ನು ಈ ರೀತಿಯಲ್ಲಿ ಗ್ರಹಿಸಬಹುದು ಚನ್ದಿಯರಸರು ಸುಳ್ಗಲ್ಲು ನಾಡಿಗೆ ಸೇರಿರುವ ಪಿಟ್ಟಗೆರೆ ೧೨ ರ ಗೌಡ, ಪ್ರಜೆಗಳ ಸಾಕ್ಷಿಯಾಗಿ ದೇವರಿಗೆ ಹಾಗೂ ಓರ್ವ ಕಾವಾಳಿಗ ಭಟಾರನಿಗೆ ಭೂಮಿಯನ್ನು ದಾನವಾಗಿ ನೀಡಲಾಗಿದೆ. ಇದನ್ನು ಅಳಿದವನಿಗೆ ಮಹಾಪಾತಕಗಳು ತಟ್ಟುತ್ತವೆ. ಸಗರ ರಾಜನನ್ನು ಒಳಗೊಂಡಂತೆ ಅನೇಕರು ಭೂಮಿಯನ್ನು ಆನಂದಿಸಿದರು. ಯಾವ ಸಮಯದಲ್ಲಿ ಭೂಮಿ ಯಾರಾಗಿರುತ್ತದೆಯೋ ಆಗ ಫಲ ಅವರಿಗೆ ಎಂಬ ಮುಕ್ತಾಯ ವಾಕ್ಯ ಒಳಗೊಂಡಿದೆ.

ಶಾಸನದ ಮೊದಲ ಮೂರು ಸಾಲುಗಳು ಒಂದು ಬಂಡೆಯ ಮೇಲೆ ಹಾಗೂ ಕೊನೆಯ ಸಂಸ್ಕೃತ ಸಾಲುಗಳನ್ನು ಸ್ವಲ್ಪ ಕೆಳಗೆ ಅದೆ ಬಂಡೆಯ ಮೇಲೆ ಕೊರೆಯಲಾಗಿದೆ. ಇವು ಮೇಲ್ನೋಟಕ್ಕೆ ಎರಡು ಪ್ರತ್ಯೇಕ ಶಾಸನಗಳೆಂಬ ಅನುಮಾನ ಮೂಡಿಸುತ್ತವೆ. ಕೊನೆಗೆ ಶ್ರೀ ಬಿಜಾಬ್ಬೆ ಎಂಬ ಎಂದು ಸಂಬೋಧಿಸಲಾಗಿರುವ ಪದವಿದೆ. ಶ್ರೀ ಪದ ಬಳಕೆಯಾಗಿರುವುದರಿಂದ ಆಕೆಯು ಪ್ರಮುಖ ವ್ಯಕ್ತಿ ಎಂಬುದರಲ್ಲಿ ಸಂದೇಹವಿಲ್ಲ. ಶಾಸನದಲ್ಲಿ ಚಿತ್ರದುರ್ಗದ ಪ್ರಾಚೀನ ಹೆಸರುಗಳಲ್ಲಿ ಒಂದಾದ ಸುಳ್ಗಲ್ಲು ಪದ ಸಿಗುತ್ತದೆ. ಕ್ರಿ.ಶ, ೧೧ನೇ ಶತಮಾನದವರೆಗೆ ಚಲಾವಣೆಯಲ್ಲಿದ್ದ ಹೆಸರುಗಳಲ್ಲಿ ಸೂಳ್ಗಲ್ಲು ಸಹ ಒಂದಾಗಿದೆ ಎಂದು ವಿದ್ವಾಂಸರು ಗುರುತಿಸಿದ್ದಾರೆ. ನಾಡುಂ ಎಂಬ ಪದಕ್ಕೆ ನಾಡಿನ ಒಳಗಿನ ಎಂಬ ಅರ್ಥವಿದೆ. ಪಿಟ್ಟಗೆರೆ ೧೨ ಸೂಳ್ಗಲ್ಲು ಪ್ರಾಂತ್ಯಕ್ಕೆ ಸೇರಿದ ಭಾಗವಾಗಿತ್ತು ಎಂಬುದು ಸ್ಪಷ್ಟ. ಮಣ್ಣಂ ಎಂಬ ಅಚ್ಚಗನ್ನಡ ಪದಕ್ಕೆ ಹೊಲ, ಗದ್ದೆ ಎಂಬ ಅರ್ಥದಲ್ಲಿ ೫-೧೦ನೇ ಶತಮಾನದ ಕೆಲವು ಶಾಸನಗಳಲ್ಲಿ ಬಳಕೆಯಲ್ಲಿದೆ. (ಗಮನಿಸಿ ಸಾಹಿತ್ಯ ಪರಿಷತ್ತು ನಿಘಂಟು ಸಂ, ೭) ಕಾವಾಳಿಗ ಭಟಾರನಿಗೆ ಮಣ್ಣಂ(ಭೂಮಿ) ನೀಡಲಾಗಿದೆ. ಜಯಶರ್ಮಾರವರು ಓರ್ವ ಪದವಿರುವುದರಿಂದ ಹಲವರು ಕಾಪಾಲಿಕರು ಇದ್ದಾರೆ ಎಂದು

ಊಹಿಸಬಹುದು ಎಂದಿದ್ದಾರೆ. ಪಂಡರಳ್ಳಿ ಹಾಗೂ ಗಂಜಿಕಟ್ಟೆ ಗ್ರಾಮಗಳು ಪಿಟ್ಟಗೆರೆ ೧೨ಕ್ಕೆ ಸೇರಿದ ಪ್ರದೇಶಗಳಾಗಿದ್ದಿರಬಹುದು. ಭೂಮಿಯನ್ನು ಈ ಈ ಎರಡು ಗ್ರಾಮಗಳಿಗೆ ಹೊಂದಿಕೊಂಡಿರುವ ಪ್ರಸ್ತುತ ಬೆಟ್ಟದ ಸಮೀಪ ನೀಡಲಾಗಿದೆ ಎಂದೆನಿಸುತ್ತದೆ. ಚಂದಿಯರಸ ಈ ಪ್ರಾಂತ್ಯದ ರಾಜ, ಪ್ರಾಂತ್ಯಾಧಿಕಾರಿಯೇ ಎಂಬ ಬಗ್ಗೆ ಶಾಸನದಲ್ಲಿ ಮಾಹಿತಿ ಇರುವುದಿಲ್ಲ.. ಬಿ.ಎಲ್ ರೈಸ್‌ರವರು ಎ. ಕ ೧೧ ರ ದಾವಣಗೆರೆ ತಾಲ್ಲೂಕಿನ ನಂದಿಗುಡಿಯ ೧೧೯ನೇ ಶಾಸನದಲ್ಲಿ ಗಂಗರ ಚಂದಿಯರಸನ ಬಗ್ಗೆ ಪ್ರಸ್ತಾಪಿಸುತ್ತಾರೆ. ಆದರೆ ಲಿಪಿಲಕ್ಷಣದ ಆಧಾರದ ಮೇಲೆ ನಂದಿಗುಡಿ ಶಾಸನದ ಕಾಲವನ್ನು ಕ್ರಿ.ಶ ೯೩೦ ಎಂದಿರುವುದರಿಂದ ಇವರಿಬ್ಬರೂ ಬೇರೆ ಬೇರೆ ಎನಿಸುತ್ತದೆ. ಆ ಕಾಲದಲ್ಲಿ ಬದ್ಧರಸ, ನಾಗಾರಸ, ಕಮ್ಮರಸರಂತಹ ಹೆಸರುಗಳನ್ನು ಸಾಮಾನ್ಯರು ಇಟ್ಟುಕೊಳ್ಳುತ್ತಿದ್ದರು. ಇಲ್ಲಿ ಚಂದಿಯರಸನಿಗೆ ಅರಸ, ದೇವ ಎಂಬ ಪದಗಳಿರುವುದರಿಂದ, ದಾನನೀಡುವ ಸ್ಥಿತಿಯನ್ನು ಹೊಂದಿರುವುದರಿಂದ ಈ ಪ್ರಾಂತ್ಯದ ಪ್ರಮುಖ ವ್ಯಕ್ತಿ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಚಂದಿಯರಸನ ಹೆಸರಿನ ಜೊತೆಗೆ ಆಳೆ, ರಾಜ್ಯಗೈಯುತ್ತಿರಲು ಪದಗಳಿಲ್ಲದೆ ಇರುವುದರಿಂದ ರಾಜ ಅಥವಾ ಪ್ರಾಂತ್ಯಾಧಿಕಾರಿ ಎಂದು ಒಪ್ಪುವುದು ಕಷ್ಟ. ಹಿಂದೆ ಗಾವುಂಡರು, ಶ್ರೇಷ್ಟಿಗಳು ಸಹ ದಾನ ನೀಡಿದ ವಿವರಗಳು ಶಾಸನಗಳಲ್ಲಿ ಸಿಗುತ್ತವೆ. ಬಿ.ಎಲ್ ರೈಸ್‌ರವರು ಚಿತ್ರದುರ್ಗ ತಾಲ್ಲೂಕಿನ ಇಟ್ಟಕೆರೆ ಬಸವನಗುಡಿಯ ಬಳಿ ನಟ್ಟಕಲ್ಲು ಎಂದು ೨೫ನೇ ಶಾಸನ ಪ್ರಕಟಿಸಿದ್ದಾರೆ. ಶಾಸನದ ಕಾಲವನ್ನು ಕ್ರಿ.ಶ ೯೭೦ ಎಂದು ಗುರುತಿಸಿದ್ದಾರೆ. ಅದರಲ್ಲಿ ಪಿಟ್ಟಗೆರೆಯ ಪ್ರಸ್ತಾಪವಿದೆ. ಡಾ.ಬಿ. ರಾಜಶೇಖರಪ್ಪನವರು ಇದು ಪಿಟ್ಟಗೆರೆ ೧೨ರ ಕೇಂದ್ರಸ್ಥಾನವೆಂದು ಶೋಧಿಸಿದ್ದಾರೆ. ಚಿತ್ರದುರ್ಗ ತಾಲ್ಲೂಕಿನಲ್ಲಿ ಬಾದಾಮಿ ಚಾಲಕ್ಯರ ಶಾಸನಗಳು ಕಂಡುಬರುವುದಿಲ್ಲ. ಕೌಮುದಿ ಮಹೋತ್ಸವದಂತಹ ಕೃತಿಯನ್ನು ಬರೆದಂತಹ ವಿಜ್ಜಿಕೆ ಶಾಸನ ಪಠ್ಯವನ್ನು ಇಷ್ಟು ತಪ್ಪಾಗಿ ರೂಪಿಸಲಾರಳು ಎಂಬ ಪ್ರಶ್ನೆ ಸಹ ಮೂಡುತ್ತದೆ. ಕಲ್ಯಾಣಿ ಚಾಲುಕ್ಯ ಶಾಸನಗಳು ದೊರೆಯುತ್ತವೆ. ಆದ್ದರಿಂದ ಕದಂಬರ ಕೊನೆಯ ಅರಸರ ಆಳ್ವಿಕೆ ಇಲ್ಲಿ ಮುಂದುವರೆದಂತೆ ತೋರುತ್ತದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಹತ್ತನೆಯ ಶತಮಾನದವರೆಗಿನ ಕೆಲವು ಶಾಸನಗಳಲ್ಲಿ ಕದಂಬಳಿಗೆ ಸಾವಿರ ನಾಡಿನ ಉಲ್ಲೇಖ ಕಂಡುಬರುತ್ತದೆ. ಈ ಸ್ಥಾನವನ್ನು ಗಂಗರು ಕಲ್ಯಾಣಿ ಚಾಲುಕ್ಯರು ತುಂಬುವವರೆಗೆ ಕದಂಬರ ಪ್ರಭುತ್ವ ಮುಂದುವರೆದಿದೆ. ಶಾಸನದ ಕೊನೆಯಲ್ಲಿ ಇರುವ ಸಂಸ್ಕೃತ ಸಾಲುಗಳನ್ನು ಗಮನಿಸುವುದಾದರೆ ಭವಿಷ್ಯ ಪುರಾಣ, ಮಹಾಭಾರತಗಳಲ್ಲಿ ಕಾಣಿಸುವ ಸಾಲುಗಳನ್ನು ಲಿಪಿಕಾರ ಇಲ್ಲಿ ಕಂಡರಿಸಿದ್ದಾನೆ. ಈ ಸಂಸ್ಕೃತ ಸಾಲುಗಳು ಕ್ರಿ.ಶ ೫-೬ ನೇಯ ಶತಮಾನಕ್ಕೆ ಸೇರಿದ ಕೈಕೇಯ ಮಹಾಕೆಲ್ಲ ಬಿರುದಿನ ಚಿತ್ರಸೇನನ ಹೊನ್ನವರ ಶಾಸನದಲ್ಲಿ(ಎ,ಇಂಡಿಕಾ ಸಂ.೩೭.ಪುಟ೩೪), ಹನುಮಾಕ್ಷಿ ಗೋಗಿಯವರ ಸುರಪುರ ತಾಲ್ಲೂಕಿನ ಶಾಸನಗಳು ಪುಸ್ತಕದ ಹಾವಿನಾಳ

ಶಾಸನದಲ್ಲಿ (ಪು.೧೯೫), ಹಾಗೂ ಪಂಡರಳ್ಳಿಯ ಸಮೀಪದ ಇಟ್ಟಗೆರೆ ಶಾಸನದಲ್ಲಿ(ಎ.ಕ.ಸಂ೦೧೧¥,ಪು.೧೮) ಕಾಣಿಸಿದೆ. ಬಹುಶ: ಪಂಡರಳ್ಳಿ ಶಾಸನದ ಸಾಲುಗಳು ಇಟ್ಟಗೆರೆ ಶಾಸನದ ಮೇಲೆ ಪ್ರಭಾವ ಬೀರಿರಬಹುದು. ಪಂಡರಳ್ಳಿ ಶಾಸನದ ಲಿಪಿಕಾರನಿಗೆ ಅಕ್ಷರಜ್ಞಾನ ಕೊರತೆ ಇದ್ದಂತೆ ತೋರುತ್ತದೆ. ಉದಾ: ಸಾಕ್ಷಿ ಎನ್ನುವುದನ್ನು ಸಕ್ಷಿ ಎಂದು, ಓರ್ವ ಎನ್ನುವುದನ್ನು ಜಯಶರ್ಮಾರವರು ತಿಳಿಸಿದಂತೆ ವೋವ ಎಂದು, ಸಗರಾದಿಭಿ:ಯನ್ನು ಸ್ಸಕರಾಜಭೀಯಾಗಿ, ಭೂಮಿ:ಗೆ ವಿಸರ್ಗವಿರಬೇಕು ಆದರೆ ನಮೊದಿಸಿರುವುದಿಲ್ಲ.

ಬಿ.ಎಲ್ ರೈಸ್‌ರವರು ಬಿಜಾಬ್ಬೆ ಶಾಸನ ಕುರಿತಂತೆ ಉಲ್ಲೇಖಗೊಂಡಿರುವ ಬಿಜಾಬ್ಬೆ ಪದವನ್ನು ಕುರಿತಂತೆ ನೀಡಿರುವ ಇಂಗ್ಲೀಷ್ ಟಿಪ್ಪಣಿಯಲ್ಲಿ **ssssigned sri bijabe?** ಎಂದು ಪ್ರಶ್ನಾರ್ಥಕವಾಗಿ ಸೂಚಿಸಿದ್ದಾರೆ. ಈ ಶಾಸನ ರಚಿಸಿದ ಬಿಜಾಬ್ಬೆ ರೂವಾರಿ, ಲಿಪಿಕಾರ್ತಿ, ದಾನ ನೀಡಿದವರಲ್ಲಿ ಒಬ್ಬರ ಎಂಬ ಬಗ್ಗೆ ಅವರಿಗೆ ಗೊಂದಲಗಳು ಇದ್ದಂತೆ ತೋರುತ್ತದೆ. ಆದ್ದರಿಂದ ಪ್ರಶ್ನಾರ್ಥಕವಾಗಿ ಸೂಚಿಸಿದ್ದಾರೆ. ಬಿಜಾಬ್ಬೆ ಹೆಸರಿನ ಪಕ್ಕದಲ್ಲಿ ಬರೆದಂ, ಲಿಖಿತ್ವಂ ಎಂಬ ಪದಗಳು ಇಲ್ಲದೆ ಇರುವುದು ಅವರಿಗೆ ಅನುಮಾನ ತಂದಿರಬಹುದು. ರಾಜಶೇಖರಪ್ಪನವರು ನಾನು ಮೊದಲು ಸ್ತ್ರೀ ಎಂದು ಗುರುತಿಸಿದ್ದು ಎಂದಿದ್ದಾರೆ, ರೈಸ್ ರವರೆ ಇದು ಸಹಿ ಎಂದಿದ್ದಾರೆ, ಜೊತೆಗೆ ರೈಸ್‌ರವರು ಎ. ಕರ್ನಾಟಿಕ ಸಂಪುಟದಲ್ಲಿ ಶಾಸನ ಲಿಪಿಕಾರರ ಬಗ್ಗೆ ವಿಶೇಷವಾಗಿ ಚರ್ಚಿಸಿರುವುದಿಲ್ಲ ಆದ್ದರಿಂದ ಲಿಪಿಕಾರರನ್ನು ನಿರ್ಲಕ್ಷಿಸಿದ್ದಾರೆ. ರಾಜಶೇಖರಪ್ಪನವರನ್ನು ಒಳಗೊಂಡಂತೆ ಕೆಲವು ವಿದ್ವಾಂಸರು ಬಿಜ್ಜೆ<ವಿಜ್ಜೆ, ವಿಜಾಬ್ಬೆ<ಬಿಜಾಬ್ಬೆ ಎಂದು ಚಾಲುಕ್ಯರ ಇಮ್ಮಡಿ ಪುಲಿಕೇಶಿಯ ಮಗ ಚಂದ್ರಾದಿತ್ಯನ ಪತ್ನಿ ವಿಜಯಾಭಟ್ಟಾರಿಕೆ ಜೊತೆಗೆ ಗುರುತಿಸುವ ಪ್ರಯತ್ನ ಮಾಡುತ್ತಾರೆ.

**ವಿಜ್ಜಿಕೆ ಯಾರು?**

ಸಂಸ್ಕೃದಲ್ಲಿ ಕೌಮುದಿ ಮಹೋತ್ಸವ(ಬೆಳದಿಂಗಳ ಹಬ್ಬ) ಎಂಬ ನಾಟಕವಿದೆ. ಅದನ್ನು ಬರೆದವರು ವಿಜ್ಜಿಕೆ ಎಂದು ಗುರುತಿಸಲಾಗಿದೆ. ಮದ್ರಾಸಿನ ಉ.ಔ.ಒ.**s** ಲೈಬ್ರೆರಿಯಲ್ಲಿದ್ದ ತಾಳೆಗರಿಯಲ್ಲಿದ್ದ ಪ್ರತಿಯನ್ನು ೧೯೨೯ರಲ್ಲಿ ರಾಮಕೃಷ್ಣ ಕವಿ ಮತ್ತು ಎಸ್.ಕೆ. ರಾಮಶಾಸ್ತ್ರೀಯವರು ಸಂಪಾದಿಸಿದರು. ಜೀರ್ಣವಾದ ಸ್ಥಿತಿಯ ತಾಳೆಗರಿಯಲ್ಲಿದ್ದ ಜ ಅಕ್ಷರದಿಂದ ವಿಜ್ಜಿಕೆ ಎಂದು ಗುರುತಿಸಿದರು. ನಾಟಕಕ್ಕೆ ಕೌಮುದಿ ಮಹೋತ್ಸವ ಎಂಬ ಹೆಸರಿರುವುದಿಲ್ಲ. ಸಂಪಾದಕರು ಕೌಮುದಿ ಮಹೋತ್ಸವ ಸಂದರ್ಭದಲ್ಲಿ ನಡೆಯುವ ನಾಟಕವಾಗಿರುವುದರಿಂದ ಮೇಲಿನ ಶೀರ್ಷಿಕೆಯನ್ನು ನೀಡಿದ್ದಾರೆ ಕಲ್ಯಾಣವರ್ಮನಿಗೂ ಅವನ ತಂದೆ ಸುಂದರವರ್ಮನ ದತ್ತು ಮಗ ಚಂಡಸೇನನ ಸಂಘರ್ಷದ ಮೂಲಕ ಕಲ್ಯಾಣವರ್ಮನ ಸಿಂಹಾಸನರೋಹಣದೊಂದಿಗೆ ನಾಟಕ ಮುಕ್ತಾಯವಾಗಿದೆ. ವಿಜ್ಜಿಕೆಯು

ದಂಡಿ ನನ್ನನ್ನು ನೋಡಿದ್ದರೆ ಸರಸ್ವತಿಯನ್ನು ಸರ್ವಶುಕ್ಲೆ(ಬಿಳಿವರ್ಣ) ಎಂದು ಕರೆಯದೆ ನನ್ನಂತೆ ನೀಲಿ ಕಮಲದ ಗಾಢ ಕಪ್ಪು ಬಣ್ಣದವಳು (ನೀಲೋತ್ಪಲ ದಳ ಶ್ಯಾಮಂ) ಎಂದು ಕರೆಯುತ್ತಿದ್ದ ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾಳೆ. ವಿಜ್ಜಿಕೆಯನ್ನು ಕರ್ನಾಟಕ ರಾಜಪ್ರಿಯೆ ಎಂದು ಕರೆಯುವ ಪದ್ಯ ಸಹ ಪ್ರಚಾರದಲ್ಲಿದೆ. ನೆರೂರು ತಾಮ್ರ ಶಾಸನದಲ್ಲಿ ಇಮ್ಮಡಿ ಪುಲಿಕೇಶಿಯ ಸೊಸೆ ಚಂದ್ರಾದಿತ್ಯನ ಹೆಂಡತಿ ವಿಜಯಭಟ್ಟಾರಿಕೆಯು ಮಾಡಿದ ದಾನ ಪ್ರಾಸ್ತಾಪವಿದೆ, ಇದರಲ್ಲಿ ಆಕೆಯನ್ನು ಶ್ರೀ ಚಂದ್ರಾದಿತ್ಯ ಪ್ರಿಯ ಮಹಿಷಿ ಶ್ರೀ ವಿಜಯಮಹಾದೇವಿ ಬುಡ್ಡಿಯ ಎಂಬ ಸ್ಪಷ್ಟವಾದ ಉಲ್ಲೇಖ ಸಿಗುತ್ತದೆ(ಗಮನಿಸಿ ಇಂಡಿಯನ್ ಆಂಟಿಕ್ಯೂರಿ. ಸಂ.೮. ೧೮೭೯, ಪುಟ೪೬) ಅದರಲ್ಲಿ ಬಿಜಾಬ್ಬೆ ಎನ್ನದೆ ವಿಜಯಮಹಾದೇವಿ ಎಂದು ಸ್ಪಷ್ಟವಾಗಿ ಕರೆದಿರುವುದನ್ನು ಕಾಣಬಹುದು, ಆದ್ದರಿಂದ ಇವರಿಬ್ಬರೂ ಬೇರೆ ಬೇರೆ ವ್ಯಕ್ತಿಗಳಾಗಿದ್ದಾರೆ, ಕೌಮುದಿ ಮಹೋತ್ಸವದ ಬಗ್ಗೆ ವಿಸ್ತೃತ ಅಧ್ಯಯನ ಮಾಡಿರುವ ಶಕುಂತಲ ರಾವ್‌ರವರು **it may be that She belonged tm eastern indiya and was married to a prince of a chalukya family..(kaumudi-mahotsva ¥ÀÅ.**12,1952) **¥ÀÅ.**12,1952) ಪು.೧೨,೧೯೫೨) ಎಂದು ಆಕೆಯ ಮೂಲವನ್ನು ಪೂರ್ವ ಬಂಗಾಳದೊಂದಿಗೆ ಜೋಡಿಸಿರುವುದನ್ನು ನೆನೆಯಬಹುದು. ಸಂಸ್ಕೃತ ಸಾಹಿತ್ಯದಲ್ಲಿ ಲಭ್ಯವಿರುವ ಕೃತಿಗಳ ಪದ್ಯಗಳಲ್ಲಿ ವಿಜ್ಜಕಂ, ವಿಜಯಾಂಕ, ವಿಜಯಭಟ್ಟಾರಿಕೆ ಎಂಬ ರೂಪದಲ್ಲಿ ಹೆಸರುಗಳು ಸಿಗುತ್ತವೆ. ೧೦ನೇ ಶತಮಾನದ ರಾಜಶೇಖರ ಸರಸ್ವತಿ ಕರ್ನಾಟಿ ವಿಜಯಾಂಕ ಎಂದಿದ್ದಾನೆ. ಪಾಂಡುರAಗಿಯವರು ಸಂಸ್ಕೃತ ಕವಿತ್ರಿಯರು ಪುಸ್ತಕದಲ್ಲಿ (ಧಾರವಾಡ ವಿ.ವಿ ಪ್ರಕಟನೆ ೧೯೫೭) ನಾಲ್ಕು ಜನ ವಿಜ್ಜಿಕೆಯರನ್ನು ಗುರುತಿಸುತ್ತಾರೆ, ಅವರೆಂದರೆ, ಚಂದ್ರಾದಿತ್ಯನ ಪತ್ನಿ ವಿಜ್ಜಿಕೆ, ನೃಪತುಂಗನ ಸೇನಾಪತಿ ಬಂಕೇಶನ ಪತ್ನಿ ವಿಜ್ಜಿಕೆ, ಪೂರ್ವ ಚಾಲುಕ್ಯರ ವಿಷ್ಣುವರ್ಧನ ತಾಯಿ ವಿಜಯಾ, ಪೂರ್ವಚಾಲುಕ್ಯರ ವಿಜಯಾದಿತ್ಯನ ಪತ್ನಿ ವಿಜಯಾ ಮಹಾದೇವಿ. ಆದ್ದರಿಂದ ಪಾಂಡುರಂಗಿಯವರು ಬಲವಾದ ಆಧಾರ ಸಿಗುವವರೆಗೆ ಇತ್ಯರ್ಥ ಮಾಡದೆ ಇರುವುದು ಯೋಗ್ಯವೆಂದು ಕೈಚೆಲ್ಲಿದ್ದಾರೆ. ಜೊತೆಗೆ ಕೌಮುದಿ ಮಹೋತ್ಸವದ ಕರ್ತೃ ವಿಜ್ಜಿಕೆಯೇ ಎಂಬ ಬಗ್ಗೆ ಸಹ ವಿದ್ವಾಂಸರಲ್ಲಿ ಗೊಂದಲಗಳಿವೆ.

ಬಿಜಾಬ್ಬೆ ಕುರಿತಾದ ಅಂಶಗಳನ್ನು ಅವಲೋಕಿಸಿದರೆ ಬಿಜಾಬ್ಬೆಯನ್ನು ವಿಜ್ಜಿಕೆ ಎಂದು ರೂಪಾಂತರಿಸಿ ವಿವೇಚಿಸುವುದು ಕಷ್ಟವಾಗುತ್ತದೆ. ಹಾಗೆಯೇ ಇಲ್ಲಿನ ಲಿಪಿಯು ತಮಟಕಲ್ಲು ಶಾಸನದ ಅಕ್ಷರಗಳನ್ನು ಹೋಲುವುದರಿಂದ ಪಂಡರಳ್ಳಿ ಶಾಸನವನ್ನು ಕ್ರಿ.ಶ. ೫ನೆಯ ಶತಮಾನಕ್ಕೆ ಬಿ.ಎಲ್ ರೈಸ್‌ರವರು ಸೂಚಿಸಿರುವುದನ್ನು ಅಲ್ಲಗಳೆಯಲಾಗದು. ಲಿಪಿಸಾಮ್ಯತೆಯ ಕಾರಣದಿಂದ ಲಿಪಿಯು ೫-೬ನೇ ಶತಮಾನದ

ನಡುವಿನ ಲಿಪಿಲಕ್ಷಣವನ್ನು ಪ್ರತಿನಿಧಿಸುವುದರಿಂದ ಬಾದಾಮಿ ಚಾಲುಕ್ಯರ ಚಂದ್ರಾದಿತ್ಯನನ್ನು ಇಲ್ಲಿನ ಚಂದಿಯರಸ, ಬಿಜಾಬ್ಬೆಯನ್ನು ವಿಜ್ಜಿಕೆಯ ಜೊತೆ ಹೋಲಿಸುವುದು ಸಮರ್ಪಕವಾಗಲಾರದು. ಪ್ರಾಚೀನ ಕರ್ನಾಟಕದಲ್ಲಿ ಸಾವಿಯಬ್ಬೆ, ಅತ್ತಿಮಬ್ಬೆ, ಪೋಳಕಬ್ಬೆ, ಹರಿಯಬ್ಬೆಯಂತೆ ಬಿಜಾಬ್ಬೆ ಸಹ ಸ್ತ್ರೀ ಸಂಬೋಧಕ ಹೆಸರೆಂಬುದು ಸ್ಪಷ್ಟವಾಗುತ್ತದೆ. ಚಿ.ಮೂರವರು ತಮ್ಮ ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕೃತಿಯಲ್ಲಿ(ಪುಟ೧೭೦)ಕಾವಳಿಗ ಭಟ ಕಾಪಾಲಿಕ ಗುರುವಾಗಿರಬೇಕು ಎಂದಿದ್ದಾರೆ. ಬಿಜಾಬ್ಬೆ ಸಹ ಅಕ್ಷರಬಲ್ಲ ಕಾಪಾಲಿಕ ಸ್ತ್ರೀ ಆಗಿದ್ದೀರಬಹುದು. ಕೌಮುದಿ ಮಹೋತ್ಸವ ರಚಿಸಿದ ವಿಜಯಭಟ್ಟಾರಿಕೆಗಿಂತ ನೂರು ವರ್ಷ ಪೂರ್ವದಲ್ಲೇ ಕರ್ನಾಟಕದಲ್ಲಿ ಶಾಸನ ಪದ್ಯ ಸಿದ್ಧಪಡಿಸಿದ ಕವಿ ಜೊತೆಗೆ ಲಿಪಿಕಾರ್ತಿಯಾಗಿ ಬಿಜಾಬ್ಬೆ ಕಾಣಿಸಿಕೊಂಡಿದ್ದಾಳೆ ಎಂಬುದು ಇನ್ನೂ ಹೆಚ್ಚಿನ ಸಂಶೋಧನೆಯಿಂದ ದೃಢಪಟ್ಟಲ್ಲಿ ಉತ್ತಮ ದಾಖಲೆಯಾಗುತ್ತದೆ. ಶಾಸನದ ಪಠ್ಯ ರೂಪುಗೊಳ್ಳುವಲ್ಲಿ ಅವರ ಕೊಡುಗೆ ಮಹತ್ವದ್ದಾಗಿದೆ ಎಂಬುರಲ್ಲಿ ಅನುಮಾನವಿಲ್ಲ ಎಂಬುದನ್ನು ಶಾಸನ ಸ್ಪಷ್ಟಪಡಿಸುತ್ತದೆ.

## ಪರಾಮರ್ಶನ ಗ್ರಂಥಗಳು

೧. ಎಫಿಗ್ರಾಫಿಯ ಕರ್ನಾಟಿಕ ಸಂಪುಟ ೧೧, ಬಿ.ಎಲ್ ರೈಸ್
೨. ಪ್ರಾಚೀನ ಚಿತ್ರದುರ್ಗ. ಡಾ.ಬಿ ರಾಜಶೇಖರಪ್ಪ